# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 83
2. ಸದಸ್ಯರ ಹೆಸರು : ಶ್ರೀ ಎಂ.ಎ.ಗೋಪಾಲಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 09-07-2018

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಜಂಬೂರು-ನುಗ್ಗೇಹಳ್ಳಿ ಮತ್ತು ಹಿರಿಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಮಂಜೂರಾದ ಅನುದಾನದ ಸಂಪೂರ್ಣ ವಿವರ ನೀಡುವುದು; ಈ ಯೋಜನೆಗಳ ಅನುಷ್ಠಾನಕ್ಕಾಗಿ ಇಲ್ಲಿಯವರೆಗೆ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ಹಣದ ವಿವರ ನೀಡುವುದು; | ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ನುಗ್ಗೇಹಳ್ಳಿ ಏತ ನೀರಾವರಿ ಯೋಜನೆ ಮತ್ತು ಹಿರೀಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ಮಂಜೂರಾದ ಅನುದಾನ ಮತ್ತು ಗುತ್ತಿಗೆದಾರರಿಗೆ ಬಿಡುಗಡೆ ಮಾಡಿರುವ ವೆಚ್ಚದ ಸಂಪೂರ್ಣ ವಿವರಗಳು ಈ ಕೆಳಕಂಡಂತಿವೆ : (see tables below) |

| ನುಗ್ಗೇಹಳ್ಳಿ ಏತ ನೀರಾವರಿ ಯೋಜನೆ (ರೂ.ಲಕ್ಷಗಳಲ್ಲಿ) | | |
|---|---|---|
| ವರ್ಷ | ಅನುದಾನ | ವೆಚ್ಚ |
| 2013-14 | 800.00 | 128.01 |
| 2014-15 | 300.00 | 465.50 |
| 2015-16 | 200.00 | 98.19 |
| 2016-17 | 1000.00 | 144.96 |
| 2017-18 | 500.00 | 270.97 |
| ಒಟ್ಟು | 2800 | 1107.63 |
| ಹಿರೀಸಾವೆ-ಶ್ರವಣಬೆಳಗೊಳ ಯೋಜನೆ (ರೂ.ಲಕ್ಷಗಳಲ್ಲಿ) | | |
| 2016-17 | 1600.00 | 1226.47 |
| 2017-18 | 1000.00 | 2130.55 |
| ಒಟ್ಟು | 2600 | 3357.02 |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಆ | ಈ ಯೋಜನೆಗಳಿಗಾಗಿ ಭೂಸ್ವಾಧೀನ ಮಾಡಿಕೊಂಡಿರುವ ಜಮೀನುಗಳ ವಿವರ ಹಾಗೂ ಜಮೀನುಗಳ ಮಾಲೀಕರ ವಿವರ ನೀಡುವುದು; ರೈತರಿಗೆ ಪರಿಹಾರವನ್ನು ನೀಡಲು ಸರ್ಕಾರವು ರೂಪಿಸಿರುವ ಮಾನದಂಡಗಳೇನು; | ನುಗ್ಗೇಹಳ್ಳಿ ಏತ ನೀರಾವರಿ ಯೋಜನೆಗಾಗಿ ಈ ಕೆಳಕಂಡ ಗ್ರಾಮಗಳ ಜಮೀನನ್ನು ರೈತರುಗಳಿಂದ ಒಪ್ಪಿಗೆ ಪತ್ರ ಪಡೆದು ನೇರವಾಗಿ ಖರೀದಿಸಲು ದರ ನಿರ್ಧರಣೆ ಮಾಡಿಕೊಡಲು ಕೋರಲಾಗಿದೆ : (see table below) |

| ಕ್ರ. ಸಂ. | ಗ್ರಾಮದ ಹೆಸರು | ವಿಸ್ತೀರ್ಣ ಎ-ಗುಂ |
|---|---|---|
| 1 | ಗೊಲ್ಲರಹೊಸಹಳ್ಳಿ | 0-35 |
| 2 | ಪಿ. ದಾಸಪುರ | 2-30 |
| 3 | ಬಿ. ಚೌಡೇನಹಳ್ಳಿ | 0-14 ½ |
| 4 | ದಡ್ಡಿಹಳ್ಳಿ | 3-03 ½ |
| 5 | ದ್ಯಾವೇನಹಳ್ಳಿ | 2-39 |
| 6 | ಮಾವಿನಹಳ್ಳಿ | 6-15 |
| 7 | ರಾಯಸಮುದ್ರ ಕಾವಲು | 6-27 ½ |
| 8 | ಅವ್ವೇರಹಳ್ಳಿ | 5-04 |
| 9 | ವಿರುಪಾಕ್ಷಪುರ | 7-05 |
| 10 | ನುಗ್ಗೇಹಳ್ಳಿ | 5-12 |
| 11 | ಹೊನ್ನಾಮಾರನಹಳ್ಳಿ | 4-01 ½ |
| 12 | ಕೆ. ಚೌಡೇನಹಳ್ಳಿ | 2-29 ½ |
| 13 | ಅತ್ತಿಚೌಡೇನಹಳ್ಳಿ | 1-15 ¼ |
| | ಒಟ್ಟು :- | 48-31 ¾ |

ಮೇಲ್ಕಂಡ 13 ಗ್ರಾಮಗಳ ಬಾಬ್ತು 48-31 ¾ ಎಕರೆ ವಿಸ್ತೀರ್ಣದ ಭೂಮಿಯನ್ನು ಏತ ನೀರಾವರಿ ಯೋಜನೆಗಾಗಿ ನೇರ ಖರೀದಿ ಮೂಲಕ ಭೂಮಿಯನ್ನು ಸ್ವಾಧೀನ ಪಡೆಯಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಭೂಮಿಯ ವಿಧಗಳಿಗೆ ಅನುಗುಣವಾಗಿ ದರ ನಿರ್ಧರಿಸಿ ಕಳುಹಿಸಲಾಗಿದೆ. ರೈತರುಗಳಿಂದ ಎಲ್ಲಾ ದಾಖಲಾತಿಗಳನ್ನು ಪಡೆದು ಕ್ರಯ ಮಾಡಿಕೊಳ್ಳಲು ಕಾರ್ಯ ಪ್ರವೃತ್ತರಾಗಿದ್ದು, ಕ್ರಯ ಪತ್ರದೊಂದಿಗೆ ದಾಖಲಾತಿಗಳನ್ನು ಪಡೆದು ಭೂ ಪರಿಹಾರ ಪಾವತಿಸಲಾಗುವುದು.

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td></td><td></td><td>ಹಿರಿಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಜನಿವಾರಕೆರೆ ಏತ ನೀರಾವರಿ ಯೋಜನೆಗಾಗಿ ಈ ಕೆಳಕಂಡ ಗ್ರಾಮಗಳ ರೈತರುಗಳಿಂದ ಒಪ್ಪಿಗೆ ಪತ್ರ ಪಡೆದು ನೇರವಾಗಿ ಭೂ ಖರೀದಿಸಲು ದರ ನಿರ್ಧರಣೆ ಮಾಡಿಕೊಡಲು ಪ್ರಸ್ತಾವನೆಗಳನ್ನು ಸ್ವೀಕರಿಸಲಾಗಿದೆ :
<table>
<tr><th>ಕ್ರ ಸಂ.</th><th>ಗ್ರಾಮದ ಹೆಸರು</th><th>ವಿಸ್ತೀರ್ಣ<br>ಎ-ಗುಂ</th></tr>
<tr><td>1</td><td>ಬೇಡಿಗನಹಳ್ಳಿ</td><td>3-11 ½</td></tr>
<tr><td>2</td><td>ಕೆ. ಕಾಳೇನಹಳ್ಳಿ</td><td>5-37 ½</td></tr>
<tr><td>3</td><td>ಬಸವನಹಳ್ಳಿ</td><td>6-13 ¾</td></tr>
<tr><td>4</td><td>ಶಿವಪುರ</td><td>0-31 ½</td></tr>
<tr><td>5</td><td>ಮಂಚೇನಹಳ್ಳಿ</td><td>2-37</td></tr>
<tr><td>6</td><td>ರಾಗಿಬೊಮ್ಮೇನಹಳ್ಳಿ, ಬೆಕ್ಕ</td><td>3-07</td></tr>
<tr><td>7</td><td>ಹಳೆ ಬೆಳಗೊಳ</td><td>8-03 ¾</td></tr>
<tr><td>8</td><td>ಚನ್ನಹಳ್ಳಿ</td><td>0-24</td></tr>
<tr><td>9</td><td>ಬೊಮ್ಮೇನಹಳ್ಳಿ</td><td>0-10</td></tr>
<tr><td>10</td><td>ಹುಳಿಗೆರೆ</td><td>1-20</td></tr>
<tr><td>11</td><td>ದಡಿಘಟ್ಟ</td><td>13-30 ¾</td></tr>
<tr><td>12</td><td>ಕುಂಬೇನಹಳ್ಳಿ</td><td>1-33</td></tr>
<tr><td>13</td><td>ಬೀರನಹಳ್ಳಿ</td><td>10-00</td></tr>
<tr><td>14</td><td>ಚಲ್ಯ</td><td>7-00</td></tr>
<tr><td>15</td><td>ಚುಟ್ಟೇನಹಳ್ಳಿ</td><td>3-00</td></tr>
<tr><td>16</td><td>ಬೆಟ್ಟದಹಳ್ಳಿ</td><td>5-00</td></tr>
<tr><td></td><td>ಒಟ್ಟು</td><td>73.07 ¾</td></tr>
</table>
ಮೇಲ್ಕಂಡ 16 ಗ್ರಾಮಗಳ ಬಾಬ್ತು 73.07 ¾ ಎಕರೆ ವಿಸ್ತೀರ್ಣದ ಭೂಮಿಯನ್ನು ಏತ ನೀರಾವರಿ ಯೋಜನೆಗಾಗಿ ನೇರ ಖರೀದಿ ಮೂಲಕ ಭೂಮಿಯನ್ನು ಸ್ವಾಧೀನ ಪಡೆಯಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದರ ನಿರ್ಧರಣಾ ಸಲಹ ಸಮಿತಿ ಸಭೆಯಲ್ಲಿ ಭೂಮಿಯ ವಿಧಗಳಿಗೆ ಅನುಗುಣವಾಗಿ ದರ ನಿರ್ಧರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಮಧ್ಯೆ, ಚುನಾವಣೆ ಕಾರ್ಯ ಕಲಾಪಗಳಿಂದಾಗಿ ವಿಳಂಬವಾಗಿದ್ದು, ದರ ನಿರ್ಧರಣೆ ಕಾರ್ಯ ಪೂರ್ಣಗೊಳಿಸಲಾಗುವುದು.<br>ರೈತರಿಗೆ ಪರಿಹಾರವನ್ನು ನೀಡಲು ಸರ್ಕಾರವು ರೂಪಿಸಿರುವ ಮಾನದಂಡಗಳ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ಲಗತ್ತಿಸಿದೆ.</td></tr>
<tr><td>ಇ</td><td>ಈ ಯೋಜನೆಗಳಿಗಾಗಿ ಜಮೀನುಗಳನ್ನು ನೀಡಿರುವ ರೈತರಿಗೆ ಪರಿಹಾರ ಹಣವನ್ನು ಬಿಡುಗಡೆ ಮಾಡಲಾಗಿದೆಯೇ; ಹಣ ಬಿಡುಗಡೆಯಾಗಿದ್ದಲ್ಲಿ, ಎಷ್ಟು ರೈತರಿಗೆ ಪರಿಹಾರವನ್ನು ಈಗಾಗಲೇ ನೀಡಲಾಗಿದೆ; (ವಿವರ ನೀಡುವುದು) ಬಾಕಿ ರೈತರಿಗೆ ಪರಿಹಾರ ಹಣವನ್ನು ಬಿಡುಗಡೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)</td><td>ನುಗ್ಗೇಹಳ್ಳಿ ಏತ ನೀರಾವರಿ ಯೋಜನೆಗಳಿಗಾಗಿ ಜಮೀನುಗಳನ್ನು ನೀಡಲಿರುವ ರೈತರುಗಳಿಗೆ ಪರಿಹಾರದ ಹಣವನ್ನು ಪಾವತಿಸಲು ಪ್ರಸಕ್ತ ರೂ.1.00 ಕೋಟಿಗಳ ಅನುದಾನ ಬಿಡುಗಡೆಯಾಗಿದೆ. ರೈತರ ಭೂಮಿಯನ್ನು ಕ್ರಯ ಮಾಡಿಕೊಂಡು ಕ್ರಯ ಪತ್ರ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಲಾಗುವಂತೆ ಪರಿಹಾರದ ಹಣವನ್ನು ಪಾವತಿಸಲು ಕ್ರಮ ವಹಿಸಲಾಗುವುದು.<br><br>ಹಿರಿಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಜನಿವಾರಕೆರೆ ಏತ ನೀರಾವರಿ ಯೋಜನೆಗಾಗಿ 16 ಗ್ರಾಮಗಳ ಬಾಬ್ತು 73.07 ¾ ಎಕರೆ ವಿಸ್ತೀರ್ಣದ ಭೂಮಿಯನ್ನು ಏತ ನೀರಾವರಿ ಯೋಜನೆಗಾಗಿ ನೇರ ಖರೀದಿ ಮೂಲಕ ಭೂಮಿಯನ್ನು ಸ್ವಾಧೀನ ಪಡೆಯಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದರ ನಿರ್ಧರಣಾ ಸಲಹ ಸಮಿತಿ ಸಭೆಯಲ್ಲಿ ಭೂಮಿಯ ವಿಧಗಳಿಗೆ ಅನುಗುಣವಾಗಿ ದರ ನಿರ್ಧರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಮಧ್ಯೆ, ಚುನಾವಣೆ ಕಾರ್ಯ ಕಲಾಪಗಳಿಂದಾಗಿ ವಿಳಂಬವಾಗಿದ್ದು, ದರ ನಿರ್ಧರಣೆ ಕಾರ್ಯ ಪೂರ್ಣಗೊಳಿಸಲಾಗುವುದು.</td></tr>
</table>

ಸಂಖ್ಯೆ: ಜಸಂಇ 39 ಎಲ್ಎಕ್ಯೂ 2018

(ಡಿ.ಕೆ.ಶಿವಕುಮಾರ್)
ಜಲ ಸಂಪನ್ಮೂಲ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎ.ಗೋಪಾಲಸ್ವಾಮಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 83 ಕ್ಕೆ ಅನುಬಂಧ

### ರೈತರಿಗೆ ಪರಿಹಾರವನ್ನು ನೀಡಲು ಸರ್ಕಾರವು ರೂಪಿಸಿರುವ ಮಾನದಂಡಗಳು

ರೈತರಿಗೆ ಪರಿಹಾರ ನೀಡುವ ಸಂಬಂಧ ಭೂಸ್ವಾಧೀನದಲ್ಲಿ ಉಚಿತ ಪರಿಹಾರ ಮತ್ತು ಪಾರದರ್ಶಕತೆ ಪುನರ್ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ 2013 ಕಾಯ್ದೆಯನ್ನು ದಿ:1/1/2014 ರಿಂದ ಅನ್ವಯವಾಗುವಂತೆ ಜಾರಿಗೆ ತರಲಾಗಿದ್ದು, ಭೂಸ್ವಾಧೀನದ ಐ ತೀರ್ಮ ರಚಿಸಿ ಪರಿಹಾರ ಪಾವತಿಸುವ ಸಂಬಂಧ ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 152 ಭೂಸ್ವಾಬೇ/2013 ದಿನಾಂಕ:10/8/2016 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

1. 1894ರ ಭುಸ್ವಾಧೀನ ಕಾಯ್ದೆಯಡಿ ಪ್ರಕ್ರಿಯೆ ಪ್ರಾರಂಬಿಸಿ ಐ ತೀರ್ಮ ರಚಿಸಲು ಬಾಕಿ ಇರುವ ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013ರ ಕಲಂ (26)ರಡಿ ಜಮೀನಿನ ಮಾರುಕಟ್ಟೆ ಬೆಲೆಯನ್ನು ನಿರ್ಧರಿಸುವಾಗ ಕಲಂ (27) ಮತ್ತು (29)ರ ಸೂಚನೆಯಂತೆ ಜಮೀನಿಗೆ ಹೊಂದಿಕೊಂಡಿರುವ ಮರ ಮಾಲ್ಕಿ ಕಟ್ಟಡ ಮತ್ತು ಇತ್ಯಾದಿಗಳನ್ನು ಸಹ ಸೇರಿಸಿಕೊಂಡು ಮೂಲ ಮಾರುಕಟ್ಟೆ ಬೆಲೆಯನ್ನು ನಿರ್ದರಿಸಬೇಕು. ಈ ಮೂಲ ಮಾರುಕಟ್ಟೆ ಬೆಲೆಯನ್ನು ಕಲಂ (26)(2)ರಂತೆ ಸರ್ಕಾರದ ಪ್ರಕಟಣಾ ಸಂಖ್ಯೆ ಕಂಇ 58 ಭೂಸ್ವಾಬೆ 2014 ದಿನಾಂಕ:3/5/2014 ರಲ್ಲಿ ಸೂಚಿಸಿರುವಂತೆ ಗುಣಾಂಶ (Multiplication factor) ದೊಂದಿಗೆ ಮೂಲ ಮಾರುಕಟ್ಟೆ ಬೆಲೆಯನ್ನು ಗುಣಿಸಿದಾಗ ಸ್ವಾಧೀನಪಡಿಸಿಕೊಳ್ಳುವ ಜಮೀನಿನ ಮಾರುಕಟ್ಟೆ ಬೆಲೆ ನಿರ್ಧಾರವಾಗುತ್ತದೆ.
2. ಕಂಡಿಕೆ (1)ರಂತೆ ನಿಗದಿಪಡಿಸಿದ ಮಾರುಕಟ್ಟೆ ಬೆಲೆಯ ಮೇಲೆ ಶೇ.100 ರಷ್ಟು ಸೊಲೇಷಿಯಂ ಅನ್ನು ನೀಡಬೇಕು.
3. ಕಂಡಿಕೆ (1)ರಂತೆ ನಿಗದಿಪಡಿಸಿದ ಜಮೀನಿನ ಮಾರುಕಟ್ಟೆ ಬೆಲೆಯ ಮೇಲೆ ಶೇ.12 ರಷ್ಟು ಹೆಚ್ಚುವರಿ ಮಾರುಕಟ್ಟೆ ಮೌಲ್ಯವನ್ನು ನೀಡಬೇಕಾಗುತ್ತದೆ. ಹೀಗೆ ನೀಡುವಾಗ (ಎ) 1894ರ ಭೂಸ್ವಾಧೀನ ಕಾಯ್ದೆಯಡಿ ಪ್ರಕ್ರಿಯೆ ನಡೆಸಿದ ಪ್ರಕರಣಗಳಲ್ಲಿ ಸದರಿ ಕಾಯ್ದೆಯ ಕಲಂ 4(1) ರ ಪ್ರಾಥಮಿಕ ಅಧಿಸೂಚನೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಭೂಸ್ವಾಧೀನ ಪ್ರಕ್ರಿಯೆ ನಡೆಸಿದ ಜಮೀನಿನ ಕಬ್ಜೆ ಪಡೆದ ದಿನಾಂಕದವರೆಗೆ ಅಥವಾ ಪರಿಹಾರ ಧನದ ಐತೀರ್ಪಿನ ದಿನಾಂಕದವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಲೆಕ್ಕ ಹಾಕುವುದು.

   (ಬಿ) "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ರನ್ವಯ ನಡೆಸುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಇದೇ ಕಾಯ್ದೆಯ ಕಲಂ4(2)ರನ್ವಯ ಸಾಮಾಜಿಕ ಪರಿಣಾಮ ನಿರ್ಧರಣೆ (ಎಸ್.ಐ.ಎ) ಅಧಿಸೂಚನೆಯ ಪ್ರಕಟಣೆ ದಿನಾಂಕದಿಂದ ಪರಿಹಾರ ಧನದ ಐತೀರ್ಪಿನ ದಿನಾಂಕದವರೆಗೆ ಅಥವಾ ಭೂಸ್ವಾಧೀನ ಪ್ರಕ್ರಿಯೆ ನಡೆಸಿದ ಜಮೀನಿನ ಕಬ್ಜೆ ಪಡೆದ ದಿನಾಂಕದ ವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಲೆಕ್ಕ ಹಾಕುವುದು.
4. ಕಂಡಿಕೆ (1),(2), (3)ರ ಅಂಶಗಳನ್ನು ಸೇರಿಸಿದಾಗ ಒಟ್ಟು ಐ-ತೀರ್ಪಿನ ಮೊತ್ತವಾಗುತ್ತದೆ.

ಇದಲ್ಲದೆ ಭೂಮಾಲೀಕರಿಗೆ ಸುಲಭವಾಗಿ ಹಾಗೂ ಶೀಘ್ರವಾಗಿ ಪರಿಹಾರ ನೀಡುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಕಂಇ 54/ಭೂಸ್ವಾಳ 2014 ದಿನಾಂಕ:31/5/2016 ರಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಧರ ನಿರ್ಧರಣಾ ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ಭೂಮಾಲೀಕರು ನೇರ ಖರೀದಿಗೆ ಒಪ್ಪಿಗೆ ಸಲ್ಲಿಸಿದ್ದಲ್ಲಿ, ಗರಿಷ್ಟ 100 ಎಕರೆ ಮೀರದಂತೆ ನೇರ ಖರೀದಿ ಪ್ರಕ್ರಿಯೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.